ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸರ್ವಜ್ಞನಗರ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಗೆ ಒಳಪಡುವ ವಾರ್ಡ್ ಸಂಖ್ಯೆ.30 ಕಾಡುಗೊಂಡನಹಳ್ಳಿಗೆ ಸಂಬಂಧಿಸಿದಂತೆ ದಿನಾಂಕ: 05.12.2020 ರಂದು ಶ್ರೀ.ತಿಪ್ಪೇಸ್ವಾಮಿ, ನೋಡಲ್ ಅಧಿಕಾರಿಗಳು ಇವರ ಅಧ್ಯಕ್ಷತೆಯಲ್ಲಿ ನಡೆದ ವಾರ್ಡ್ ಸಮಿತಿ ಮತ್ತು ವಿಪತ್ತು ನಿರ್ವಹಣಾ ಸಮಿತಿ ಸಭೆಯ ನಡಾವಳಿಗಳು.

ಸಭೆಯಲ್ಲಿ ಹಾಜರಿದ್ದವರ ವಿವರ:-

1) ಶ್ರೀ.ತಿಪ್ಪೇಸ್ವಾಮಿ, ನೋಡಲ್ ಅಧಿಕಾರಿ & ವಾರ್ಡ್ ಸಮಿತಿ ಅಧ್ಯಕ್ಷರು, ವಾ-30 ಕೆ.ಜಿ.ಹಳ್ಳಿ
2) ಶ್ರೀ.ಬಿ.ಎನ್.ರಾಮಕೃಷ್ಣಯ್ಯ, ಸಹಾಯಕ ಅಭಿಯಂತರರು, ಮತ್ತು ಕಾರ್ಯದರ್ಶಿಗಳು ವಾರ್ಡ್ ಸಂಖ್ಯೆ.30. ಕೆ.ಜಿ.ಹಳ್ಳಿ.
3) ಶ್ರೀ.ಜಿ.ಆದಿನಾರಾಯಣ, ಸಹಾಯಕ ಅಭಿಯಂತರರು, ಬೆಸ್ಕಾಂ ಉಪ-ವಿಭಾಗ, ಪಿಳ್ಳಣ್ಣಗಾರ್ಡನ್ ಕೆ.ಜಿ.ಹಳ್ಳಿ, ಬೆಂಗಳೂರು
4) ಶ್ರೀ.ರಾಮಕೃಷ್ಣ, ಕಂದಾಯ ಅಧಿಕಾರಿ, ಹೆಚ್.ಬಿ.ಆರ್,
5) ಶ್ರೀಮತಿ.ಮೋನಿಕಾ, ಕಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್ ಸಂಖ್ಯೆ.30, ಕೆ.ಜಿ.ಹಳ್ಳಿ
6) ಶ್ರೀ.ಕೆ.ಪ್ರಸನ್ನ ಕುಮಾರ್, ಸಂಚಾರ ಪೋಲೀಸ್ ಠಾಣೆ, ಕೆ.ಜಿ.ಹಳ್ಳಿ.
7) ಶ್ರೀಮತಿ. ಡಾ|| ಶೋಭಾ.ಎಂ, ಪ್ರಾಥಮಿಕ ಆರೋಗ್ಯ ಕೇಂದ್ರ ಕೆ.ಜಿ.ಹಳ್ಳಿ
8) ಶ್ರೀ. ಆರ್.ರಾಜೇಂದ್ರನ್, ಮಾಜಿ ವಾರ್ಡ್ ಸಮಿತಿ ಸದಸ್ಯರು.
9) ಶ್ರೀ.ಜೈ ದೇವ ಪ್ರಕಾಶ್, ಮಾಜಿ ವಾರ್ಡ್ ಸಮಿತಿ ಸದಸ್ಯರು.
10) ಶ್ರೀಮತಿ.ಮುಫೀಸ್ ಬೇಗ್, ಸಾರ್ವಜನಿಕರು
11) ಶ್ರೀಮತಿ.ನಜ್ನೀನ ಬೇಗಂ, ಸಾರ್ವಜನಿಕರು
12) ಯಾಸೀರ್ ಮೊಹಮ್ಮದ್, ಸಾರ್ವಜನಿಕರು
13) ಶ್ರೀ.ಸೈಯದ್ ಆಸಿಫ್, ಸಾರ್ವಜನಿಕರು

ವಾರ್ಡ್ ಸಮಿತಿಯ ಸದಸ್ಯ ಕಾರ್ಯದರ್ಶಿ ಸಭೆಯಲ್ಲಿ ಹಾಜರಿದ್ದ ನೋಡಲ್ ಅಧಿಕಾರಿಗಳು, ಇತರೆ ಅಧಿಕಾರಿಗಳು, RWA ಸದಸ್ಯರುಗಳು ಮತ್ತು ಸಾರ್ವಜನಿಕರನ್ನು ಸ್ವಾಗತಿಸುವುದರೊಂದಿಗೆ ಸಭೆಯನ್ನು ಪ್ರಾರಂಭಿಸಲಾಯಿತು.

ಈ ಹಿಂದಿನ ಸಭೆಯಲ್ಲಿ ಚರ್ಚಿತವಾದ ವಿಷಯಗಳ ಬಗ್ಗೆ ಪುನರ್ ಅವಲೋಕಿಸಲಾಯಿತು.

- **ಬೀದಿ ದೀಪ ನಿರ್ವಹಣೆ ಬಗ್ಗೆ:-** ವಾರ್ಡ್‌ನ ಬಹುತೇಕ ರಸ್ತೆಗಳಲ್ಲಿ LED ಲೈಟ್‌ಗಳು ರಿಪೇರಿಯಲ್ಲಿದ್ದು, ಶೀಘ್ರ ರಿಪೇರಿ ಮಾಡಬೇಕೆಂದು ಶ್ರೀ.ಆಸೀಫ್‌ರವರು ಸಭೆಯಲ್ಲಿ ತಿಳಿಸಿದರು. ಬಿ.ಎಂ.ಲೇಔಟ್ ಪಾರಿಜಾತ ಸ್ಕೂಲ್ ಮತ್ತು ಸುತ್ತಮುತ್ತಲ ಪ್ರದೇಶದಲ್ಲಿ ಬೆಳಗಿನ ಜಾವ 4.00 ಗಂಟೆಗೆ ಲೈಟ್‌ಗಳು ಸ್ಥಗಿತಗೊಳ್ಳುತ್ತಿದ್ದು, ಕತ್ತಲೆಯಲ್ಲಿ ಕಳ್ಳತನ ಇತ್ಯಾದಿಗಳಿಗೆ ಆಸ್ಪದವಾಗುತ್ತಿರುವುದರಿಂದ ಶೀಘ್ರ ಟೈಮರ್‌ನಲ್ಲಿರುವ ತೊಂದರೆಯನ್ನು ಸರಿಪಡಿಸಬೇಕೆಂದು ಶ್ರೀ.ರಾಜೇಂದ್ರರವರು ಸಭೆಯಲ್ಲಿ ತಿಳಿಸಿದರು.

ಕಾರ್ಯಪಾಲಕ ಅಭಿಯಂತರರು (ವಿದ್ಯುತ್) ಪೂರ್ವ ರವರಿಗೆ ಪ್ರತಿ ಬಾರಿಯೂ ಸಭೆಗೆ ಹಾಜರಾಗಲು ನೋಟೀಸ್ ಕಳುಹಿಸುತ್ತಿದ್ದಾಗ್ಯೂ ಸಹ ಸದರಿಯವರು ಸಂಬಂಧಿಸಿದವರನ್ನು ಸಭೆಗೆ ಕಳುಹಿಸುತ್ತಿಲ್ಲ. ಸಭೆಯಲ್ಲಿ ಹಾಜರಿದ್ದ ಸಾರ್ವಜನಿಕರು ವಿದ್ಯುತ್ ವಿಭಾಗದ ಸಂಬಂಧಪಟ್ಟವರನ್ನು ಸಭೆಗೆ ಕರೆಸಲು ಒತ್ತಾಯಿಸುತ್ತಿದ್ದು, ಈ ಬಗ್ಗೆ ದಿನಾಂಕ: 07.11.2020 ರಂದು ನಡೆದ ಸಭೆಯ ನಡಾವಳಿಗಳಲ್ಲಿ ಸಹ ಸೂಚಿಸಿ ಸದರಿಯವರಿಗೆ ಪ್ರತಿ ಕಳುಹಿಸಲಾಗಿದೆ. ಆದಾಗ್ಯೂ ವಿದ್ಯುತ್ ವಿಭಾಗದಿಂದ ಸಂಬಂಧಪಟ್ಟವರು ಸಭೆಗೆ ಹಾಜರಾಗುತ್ತಿಲ್ಲ.

ಈ ಹಿನ್ನೆಲೆಯಲ್ಲಿ ವಾರ್ಡ್ ಸಮಿತಿ ಸಭೆಗೆ ಹಾಜರಾಗಲು ಹಾಗೂ ಸಾರ್ವಜನಿಕ ದೂರುಗಳನ್ನು ಪರಿಹರಿಸಲು ಕ್ರಮ ಕೈಗೊಳ್ಳಲು ನೋಡಲ್ ಆಫೀಸರ್ ರವರು ಕಾರ್ಯಪಾಲಕ ಅಭಿಯಂತರರು ವಿದ್ಯುತ್ (ಪೂರ್ವ) ರವರಿಗೆ ತಿಳಿಸಿದರು.

- **(ಕ್ರಮ :- ಕಾರ್ಯಪಾಲಕ ಅಭಿಯಂತರರು ವಿದ್ಯುತ್ ವಿಭಾಗ (ಪೂರ್ವ) ಬೆಂಗಳೂರು)**

- **ಕೊರೋನ ನಿರ್ವಹಣೆ ಬಗ್ಗೆ :-** ಸಭೆಯಲ್ಲಿ ಹಾಜರಿದ್ದ ಡಾ॥ ಶೋಭಾ ರವರು ವಾರ್ಡ್ ವ್ಯಾಪ್ತಿಯಲ್ಲಿ ಕೊರೋನ ಸೋಂಕು ಬಹುತೇಕ ಕಡಿಮೆಯಾಗಿದ್ದು, ಕೇವಲ 8 ಸಕ್ರಿಯ ಪ್ರಕರಣಗಳು ಇರುವುದಾಗಿ ಸಭೆಗೆ ತಿಳಿಸಿದರು.

  ವಾರ್ಡ್ ವ್ಯಾಪ್ತಿಯಲ್ಲಿ ಪ್ರತಿ ದಿನ 100 ಟೆಸ್ಟ್‌ಗಳನ್ನು ಮಾಡುವ ಗುರಿ ನಿಗಧಿಯಾಗಿದ್ದು, ಕೇವಲ 40 ಟೆಸ್ಟ್‌ಗಳನ್ನು ಮಾತ್ರ ಮಾಡಲಾಗುತ್ತಿದ್ದು, ಸಾರ್ವಜನಿಕರು ಟೆಸ್ಟ್ ಮಾಡಿಸಿಕೊಳ್ಳಲು ಸಹಕರಿಸುತ್ತಿಲ್ಲ ಎಂದು ತಿಳಿಸಿದರು.

  ಈ ಬಗ್ಗೆ ಸ್ಥಳೀಯ ಮುಖಂಡರು ಸಂಘ-ಸಂಸ್ಥೆಗಳ ಸದಸ್ಯರು ಸ್ವಯಂ ಪ್ರೇರಣೆಯಿಂದ ಸಾರ್ವಜನಿಕರ ಮನವೊಲಿಸಲು ನೋಡಲ್ ಆಫೀಸರ್ ರವರು ತಿಳಿಸಿದರು.

  (ಕ್ರಮ :- ಆರೋಗ್ಯ ವೈದ್ಯಾಧಿಕಾರಿಗಳು ಪ್ರಾಥಮಿಕ ಆರೋಗ್ಯ ಕೇಂದ್ರ ಕೆ.ಜಿ.ಹಳ್ಳಿ)

- **ಬೀದಿ ನಾಯಿಗಳ ನಿರ್ವಹಣೆ:-** ವಾರ್ಡ್ ವ್ಯಾಪ್ತಿಯಲ್ಲಿ ಬೀದಿ ನಾಯಿಗಳ ಕಾಟ ತುಂಬಾ ಜಾಸ್ತಿಯಾಗಿದ್ದು, ಬೀದಿ ನಾಯಿಗಳ ನಿರ್ವಹಣೆ ಬಗ್ಗೆ ಸಂಬಂಧಪಟ್ಟವರು ಗಮನಹರಿಸಿ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಸಾರ್ವಜನಿಕರು ತಿಳಿಸಿದರು.
  ಈ ಬಗ್ಗೆ ಪಶುಪಾಲನೆ ಇಲಾಖೆಯಿಂದ ಶೀಘ್ರ ಕ್ರಮ ಕೈಗೊಳ್ಳಬೇಕೆಂದು ನೋಡಲ್ ಅಧಿಕಾರಿಯವರು ತಿಳಿಸಿದರು.
  (ಕ್ರಮ: ಪಶು ವೈದ್ಯಾಧಿಕಾರಿಗಳು ಬಿ.ಬಿ.ಎಂ.ಪಿ ಪೂರ್ವ,)

- **ನೀರು ಸರಭರಾಜು ಮತ್ತು ಒಳಚರಂಡಿ ವ್ಯವಸ್ಥೆ ಬಗ್ಗೆ (ಬಿ.ಡಬ್ಲ್ಯೂ.ಎಸ್.ಎಸ್.ಬಿ):-** ಬಿ.ಡಬ್ಲ್ಯೂ.ಎಸ್.ಎಸ್.ಬಿ ಯಿಂದ ವಾರ್ಡ್‌ನ ಕೆಲ ಭಾಗಗಳಲ್ಲಿ ಕಾವೇರಿ ನೀರನ್ನು ವಾರಕ್ಕೆ ಒಂದು ಬಾರಿ 1 ಗಂಟೆ ಮಾತ್ರ ಬಿಡುತ್ತಿದ್ದು, ಇದು ಸಾಕಾಗುತ್ತಿಲ್ಲ, ನೀರನ್ನು 2 ಗಂಟೆ ಬಿಟ್ಟಲ್ಲಿ ಸ್ವಲ್ಪ ಪರಿಸ್ಥಿತಿ ಸುಧಾರಿಸುತ್ತದೆ ಎಂದು ಶ್ರೀ.ಜೈದೇವ್ ಕುಮಾರ್ ರವರು ತಿಳಿಸಿದರು.
  ಈ ಬಗ್ಗೆ ಬಿ.ಡಬ್ಲ್ಯೂ.ಎಸ್.ಎಸ್.ಬಿ ರವರು ಸೂಕ್ತ ಕ್ರಮ ಕೈಗೊಳ್ಳಬೇಕೆಂದು ನೋಡಲ್ ಅಧಿಕಾರಿಯವರು ತಿಳಿಸಿದರು.
  (ಕ್ರಮ :- ಸಹಾಯಕ ಕಾರ್ಯಪಾಲಕ ಅಭಿಯಂತರರು ಬಿ.ಡಬ್ಲ್ಯು.ಎಸ್.ಎಸ್.ಬಿ ಉಪ-ವಿಭಾಗ, ಫ್ರೆಜರ್ ಟೌನ್)

ಸಭೆಯಲ್ಲಿ ಹಾಜರಿದ್ದ ಎಲ್ಲರನ್ನು ವಂದಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ವಂದನೆಗಳೊಂದಿಗೆ,

ಕಾರ್ಯದರ್ಶಿಗಳು
ವಾರ್ಡ್ ಸಂಖ್ಯೆ.30.ಕೆ.ಜಿ.ಹಳ್ಳಿ

ನೋಡಲ್ ಅಧಿಕಾರಿ & ವಾರ್ಡ್ ಸಮಿತಿ ಅಧ್ಯಕ್ಷರು
ವಾರ್ಡ್ ಸಂಖ್ಯೆ.30.ಕೆ.ಜಿ.ಹಳ್ಳಿ

ಪ್ರತಿಯನ್ನು:

1. ಜಂಟಿ ಆಯುಕ್ತರು (ಪೂರ್ವ) ರವರ ಮಾಹಿತಿಗಾಗಿ ಸಲ್ಲಿಸಿದೆ.
2. ಮುಖ್ಯ ಅಭಿಯಂತರರು (ಪೂರ್ವ) ರವರ ಮಾಹಿತಿಗಾಗಿ ಸಲ್ಲಿಸಿದೆ.
3. ಕಾರ್ಯಪಾಲಕ ಅಭಿಯಂತರರು (ಸರ್ವಜ್ಞನಗರ) ರವರ ಮಾಹಿತಿಗಾಗಿ ಸಲ್ಲಿಸಿದೆ.
4. ಶ್ರೀ.ತಿಪ್ಪೇಸ್ವಾಮಿ, ಸಹಾಯಕ ಕಾರ್ಯಪಾಲಕ ಅಭಿಯಂತರರು, ಕೆ.ಜಿ.ಹಳ್ಳಿ ಉಪ-ವಿಭಾಗ, ನೋಡಲ್ ಅಧಿಕಾರಿ ಮತ್ತು ವಾರ್ಡ್ ಸಮಿತಿ ಅಧ್ಯಕ್ಷರು, ವಾರ್ಡ್ ಸಂಖ್ಯೆ.೩೦. ಕೆ.ಜಿಹಳ್ಳಿ ರವರ ಮಾಹಿತಿಗಾಗಿ ಸಲ್ಲಿಸಿದೆ.
5. ಕಾರ್ಯಪಾಲಕ ಅಭಿಯಂತರರು ವಿದ್ಯುತ್ ವಿಭಾಗ (ಪೂರ್ವ) ಬೆಂಗಳೂರು ರವರ ಮಾಹಿತಿಗಾಗಿ ಸಲ್ಲಿಸಿದೆ.
6. ಆರೋಗ್ಯ ವೈಧ್ಯಾಧಿಕಾರಿಗಳು ಪ್ರಾಥಮಿಕ ಆರೋಗ್ಯ ಕೇಂದ್ರ ಕೆ.ಜಿ.ಹಳ್ಳಿ ರವರ ಮಾಹಿತಿಗಾಗಿ ಸಲ್ಲಿಸಿದೆ.
7. ಪಶು ವೈಧ್ಯಾಧಿಕಾರಿಗಳು ಬಿ.ಬಿ.ಎಂ.ಪಿ ಪೂರ್ವ ರವರ ಮಾಹಿತಿಗಾಗಿ ಸಲ್ಲಿಸಿದೆ.
8. ಸಹಾಯಕ ಕಾರ್ಯಪಾಲಕ ಅಭಿಯಂತರರು ಬಿ.ಡಬ್ಲ್ಯೂ.ಎಸ್.ಎಸ್.ಬಿ ಉಪ-ವಿಭಾಗ, ಫ್ರೆಜರ್‌ಟೌನ್ ಬೆಂಗಳೂರು ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
9. ಕಛೇರಿ ಕಡತಕ್ಕೆ.

O/C

7/12/2020

ಮುಖ್ಯ ಅಭಿಯಂತರರು (ಪೂರ್ವ)
ದಿನಾಂಕ 7/12/20

7/12/2020

ದಿನಾಂಕ 7/12/2020
ಪಾದರಾಯನಪುರ ... ಉಪ ವಿಭಾಗ

Office of the Asst. Executive Engineer
B.W.S.S.B.
Netaji Rd, Frazer Town,
Bangalore-560 005.
Dt. 07/12/2020
No. 3, Central W.S. & Sanitary Sub Division

ಕಾರ್ಯಪಾಲಕ ಅಭಿಯಂತರರ ಕಾರ್ಯಾಲಯ
ತಾ. 7/12/2020
ಬೆಂಗಳೂರು-1
ಬೃ.ಬೆಂ.ಮ.ಪಾ. ಸರ್ವಜ್ಞನಗರ

7/12/2020

7/12/2020

Medical Officer
K. G. Halli Health Centre
IPP VIII, Bangalore - 45